ಕುಣಿಗಲ್ ತಾಲೂಕಿನ ಅರ್ಜುನಹಳ್ಳಿಯಲ್ಲಿ ಜನಿಸಿದ ಬಿ.ಜಿ. ಕನಕೇಶಮೂರ್ತಿ ಕನ್ನಡ ಸಾಹಿತ್ಯ ಓದಿ, ಉಪನ್ಯಾಸಕರಾಗಿ ಕೆಲಸ ಮಾಡಿದವರು. ಕನ್ನಡ–ಮಲಯಾಳಂ ನಿಘಂಟು ಮತ್ತು ಕನ್ನಡ–ತಮಿಳು ನಿಘಂಟುಗಳ ರಚನೆ ಮತ್ತು ಕನ್ನಡ ವಿಶ್ವಕೋಶದ ಉಪಸಂಪಾದಕರಾಗಿ ಕೆಲಸ ಮಾಡಿದವರು. 'ಖಾಲಿ ಡಬ್ಬಗಳ ಕ್ಯೂ' ಅವರ ಮೊದಲ ಕವನಸಂಕಲನ. ಕಥೆ, ಕವನ, ಲೇಖನಗಳನ್ನು ಬರೆಯುವುದರ ಜೊತೆಗೆ ಅನುವಾದ ಕ್ಷೇತ್ರದಲ್ಲಿಯೂ ಆಸಕ್ತರು.

ಮುಖ್ಯವಾಗಿತ್ತು. 'ಆಯ್ತು, ಮೊದಲು ಯಾರ ಮೇಲೆ ಅಣೆಯಿಟ್ಟು ಹೇಳ್ತಿಯಾ ಹೇಳು? ನಿನಗೆ ಯಾರು ತುಂಬಾ ಇಷ್ಟ?' ಎಂದು ಕೇಳಿದ.

ಈ ಹೊತ್ತಿಗಾಗಲೇ ಅವಳು ತುಂಬು ಹೃದಯದಿಂದ ವರ್ತಿಸತೊಡಗಿದ್ದಳು. ನಿಜವಾಗಿ, ಅವಳೂ ಕೂಡ ತಾನು ಅಭಿನಯಿಸುತ್ತಿದ್ದೇನೆ ಎನ್ನುವುದನ್ನೇ ಮರೆತಿದ್ದಳು. 'ನಾನು ನನ್ನ ಅಪ್ಪನಿಗಿಂತ ಅಮ್ಮನನ್ನು ಹೆಚ್ಚು ಪ್ರೀತಿಸ್ತೀನಿ, ನನ್ನ ಅಮ್ಮನಿಗಿಂತ ಅತ್ತೆಯನ್ನು ಹೆಚ್ಚಾಗಿ ಪ್ರೀತಿಸ್ತೀನಿ, ಅತ್ತೆಗಿಂತ ಮಿಗಿಲಾಗಿ ನನ್ನ ಗಂಡನನ್ನು ಪ್ರೀತಿಸ್ತೀನಿ' ಎಂದಳು.

ಪಾಪ! 'ನನಗೆಲ್ಲಾ ಗೊತ್ತಿರೋ ಹಾಗೆ. ಇವಳು ನನ್ನನ್ನು ಮರುಳು ಮಾಡ್ತಿದ್ದಾಳೆ' ಎಂಬ ಸಂಶಯವನ್ನಿನ್ನೂ ಅವನು ಇಟ್ಟುಕೊಂಡಿದ್ದ. ನಿಜವಾಗಿ, ಅವನು ಹೇಗೆ ತಾನೆ 'ತಾನೀಗ ತಿರುಕನ ಬದಲಾಗಿ, ರಾಜನಾಗಿ ತನ್ನ ಹೆಂಡತಿಯ ಹೃದಯ ಸಿಂಹಾಸನವನ್ನು ಅಲಂಕರಿಸಿದ್ದೇನೆ' ಎಂದು ನಂಬಲು ಸಾಧ್ಯ?

'ನೋಡು ನನ್ನನ್ನು ನೀನು ಮರುಳು ಮಾಡೋಕೆ ಆಗೊಲ್ಲ, ಹೇಳು, ಈ ಕೊಳಲನ್ನು ಯಾಕೆ ತಂದೆ?' ಎಂದು, ತಾನು ಅವಳಿಗೆ ಎಚ್ಚರಿಕೆ ಕೊಡುತ್ತಿದ್ದೇನೆಯೋ ಅಥವಾ ಅವಳೊಂದಿಗೆ ವಾದಿಸುತ್ತಿದ್ದೇನೆಯೋ ಎಂಬುದನ್ನು ಅರಿಯದೆ ಕೇಳಿದ.

ಅವಳು 'ಏನು ಹಾಗೆಂದರೆ?' ಎಂದು ತಬ್ಬಿಬ್ಬಾಗಿ ತಗ್ಗಿದ ದನಿಯಲ್ಲಿ ಕೇಳಿದಳು, ತಕ್ಷಣ ತನ್ನ ಮನಸ್ಸನ್ನೂ ರಭಸವಾಗಿ ಐದು ತಿಂಗಳ ಹಿಂದಕ್ಕೆ ತಳ್ಳಿ ಅವಳು ಹೇಗೆ ಆ ವೊಹ್ರಾಜಿಯ ಅಂಗಡಿಗೆ ಹೋಗಿ, ಒಂದು ಕಂಬಕ್ಕೆ ಒರಗಿ ಕುಳಿತು ಕೈಯಲ್ಲಿ ಕೊಳಲನ್ನು ಹಿಡಿದಿರುವ ಚಿತ್ರವನ್ನು ನೋಡಿ, ಕೊಳಲನ್ನು ಕೊಳ್ಳಲು ನಿರ್ಧರಿಸಿದಳು ಎಂಬೀ ಘಟನೆಗಳನ್ನು ನೆನಪಿಸಿಕೊಂಡಳು. 'ನಾನು ಅದನ್ನು ಹೇಗೆ ತಂದೆ ಅಂತ ನೀನು ತಿಳ್ಕೊಂಡೆ? ಜಾತ್ರೆಯಲ್ಲಿ ಯಾರೋ ಇದೇ ತರಹದ ಕೊಳಲನ್ನು ಹಿಡಿದಿದ್ದನ್ನು ನೋಡಿದ್ದೆ' ಎಂದಳು.

'ನೀನೂ ಸಹ ನೋಡಿರಬಹುದು, ನಮ್ಮೂರಲ್ಲೂ ಇದೇ ತರಹದ ಕೊಳಲನ್ನು ಕೆಲವರು ಇಟ್ಕೊಂಡಿದ್ದಾರೆ. ಆದರೆ ನೀನಿದನ್ನು ತರಲು ಏನು ಕಾರಣ?'

ಅವಳು ತನ್ನ ಗಂಡನ ವಿಶ್ವಾಸವನ್ನು ಬೆಳೆಸಿಕೊಳ್ಳಲು ಆ ವ್ಯಕ್ತಿ ಹೇಳಿದ್ದು, ಅದರಿಂದ ಅವಳು ಆ ಕೊಳಲನ್ನು ಹಾಗೂ ಇತರೆ ವಸ್ತುಗಳನ್ನು ಕೊಂಡು ತಂದದ್ದನ್ನು ಹೇಗೆ ತಾನೇ ಹೇಳುವಳು?

'ಯಾಕೇಂತ ಆ ದೇವರೊಬ್ಬನಿಗೇ ಗೊತ್ತು, ಆದರೆ ಬಹಳ ಕಾಲದಿಂದ ನಾನು ಜನರೊಂದಿಗೆ ಜಗಳ ಮಾಡ್ತಿದ್ದೆ. ನಾನು ಅವರ ಮನಸ್ಸನ್ನು ಮೀರಿ ನಡೆದುಕೊಳ್ಳಲು ಕಾಲ ಹಾಗಿತ್ತು' ಎಂದಳು.

'ಹಾಗಿದ್ದ ಮೇಲೆ, ನಾನೂ ನಿನ್ನ ಮನಸ್ಸನ್ನು ಗೆಲ್ತೀನಿ'

'ನೀನಾಗಲೇ ಅದನ್ನು ಮಾಡಿದ್ದೀಯಾ'

'ಇಲ್ಲ, ಈ ಕೊಳಲಿನಿಂದ ನೀನು ಹೇಗೆ ನನ್ನ ಮನಸ್ಸನ್ನು ಗೆದ್ದೆಯೋ, ಹಾಗೆಯೇ ನಾನೂ... ನೋಡ್ತಾ ಇರು, ನಾನು ನಿನಗೇನನ್ನು ತರ್ತೀನಿ ಅಂತ' ಎಂದ.

ಅವಳು 'ಏನು ತರ್ತೀಯಾ?' ಎಂದು ಎರಡು ಮೂರು ಸಲ ಎಂದಿನಂತೆ ಕೇಳುವ ಧಾಟಿಯಲ್ಲಿ ಕೇಳಿದಳು.

ಯಾಕೋ ಅವನ ಸಂತೋಷದ ಪ್ರೀತಿಯ ಮಾತುಗಳು ಅವಳನ್ನು ಖುಷಿಗೊಳಿಸುವುದರ ಬದಲಾಗಿ ಇನ್ನೂ ಇಕ್ಕಟ್ಟಿಗೆ ಸಿಲುಕಿಸಿದವು. ಅವನು ಪೇಟೆಯಿಂದ ವಾಪಸ್ಸು ಬರುವಾಗ ತನ್ನ ಹೆಂಡತಿಗೆಂದು ಏನಿಲ್ಲದಿದ್ದರೂ ಒಂದು ರವಿಕೆಯನ್ನು ತಂದುಕೊಟ್ಟ. ಅವಳು ಅವಸರವಸರವಾಗಿ ಊಟವನ್ನು ಮುಗಿಸಿ ಮುಂದಿನ ರೂಮಿನ ಬಾಗಿಲನ್ನು ಹಾಕಿ ಅದನ್ನು ತೊಟ್ಟುಕೊಳ್ಳಲು ಪ್ರಯತ್ನಿಸಿದಳು.

ಆ ರವಿಕೆಯ ಮೇಲೆ ಎರಡು ಹಕ್ಕಿಗಳು ತಮ್ಮ ಕೊಕ್ಕುಗಳಿಂದ ಪರಸ್ಪರ ಆಟವಾಡುತ್ತಿರುವ ಕಸೂತಿ ಬಿಡಿಸಿದ್ದುದನ್ನು ನೋಡುತ್ತಾ, 'ನಿನ್ನ ತಾಯಾಣೆಯಾಗಿ ಹೇಳು, ಸುಳ್ಳು ಹೇಳಬೇಡ...ಇದನ್ನು ಎಲ್ಲಿಂದ ತಂದೆ...'